| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 63 ] [ Total No. of Printed Pages : 24

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 17. 06. 2014 ] [ Date : 17. 06. 2014

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 125 ] [ Max. Marks : 125

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| ***Total Marks*** | | | | | | | | | |

| Total Marks in words | | Grand Total | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

0137015 [ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : 

$15 \times 1 = 15$

1. ವರ್ಗೀಯ ವ್ಯಂಜನಗಳಲ್ಲಿ ಪ್ರತಿವರ್ಗದ ಒಂದು ಮತ್ತು ಮೂರನೆಯ ಅಕ್ಷರಗಳನ್ನು ಹೀಗೆಂದು ಕರೆಯುವರು

(ಎ) ಮಹಾಪ್ರಾಣ (ಬಿ) ಅಲ್ಪಪ್ರಾಣ

(ಸಿ) ಅನುನಾಸಿಕ (ಡಿ) ಯೋಗವಾಹ

*ಉತ್ತರ :* ______________________

2. ಅನ್ವರ್ಥಕ ನಾಮಪದಕ್ಕೆ ಉದಾಹರಣೆ

(ಎ) ಮನೆಗಳು (ಬಿ) ಸಿದ್ದಪ್ಪ

(ಸಿ) ಕುರಿಗಳು (ಡಿ) ನೇಕಾರ

*ಉತ್ತರ :* ______________________

3. 'ನಾನು ಸಭಿಕರ ಕ್ಷಮೆ ಕೇಳುತ್ತೇನೆ' — ಈ ವಾಕ್ಯದಲ್ಲಿರುವ ಸರ್ವನಾಮ ಪದ

(ಎ) ಕ್ಷಮೆ (ಬಿ) ನಾನು

(ಸಿ) ಕೇಳುತ್ತೇನೆ (ಡಿ) ಸಭಿಕರ

*ಉತ್ತರ :* ______________________________

4. ಹಳಗನ್ನಡದ ತೃತೀಯಾ ವಿಭಕ್ತಿ ಪ್ರತ್ಯಯ

(ಎ) ಇಂ (ಬಿ) ಅಂ

(ಸಿ) ಕ್ಕೆ (ಡಿ) ಒಳ್

*ಉತ್ತರ :* ______________________________

5. 'ಕೇಳು' ಧಾತುವಿನ ನಿಷೇಧಾರ್ಥಕ ರೂಪ

(ಎ) ಕೇಳಲಿ (ಬಿ) ಕೇಳಿತು

(ಸಿ) ಕೇಳುತ್ತದೆ (ಡಿ) ಕೇಳದು

*ಉತ್ತರ :* ______________________________

6. ನಾಮಪದಗಳ ಮೂಲರೂಪವನ್ನು ಹೀಗೆಂದು ಕರೆಯುತ್ತಾರೆ.

(ಎ) ಧಾತು (ಬಿ) ನಾಮ ಪ್ರಕೃತಿ

(ಸಿ) ಅವ್ಯಯ (ಡಿ) ಪ್ರತ್ಯಯ

*ಉತ್ತರ :* ______________________________

7. ಈ ಪದವು ಅಂಶೀ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಬೆಳ್ಗೊಡೆ (ಬಿ) ಬೆನ್ನಟ್ಟು

(ಸಿ) ಇಮ್ಮಡಿ (ಡಿ) ಮುಂಗಾರು

*ಉತ್ತರ :* ______________________________

8. ನಿಚ್ಚಣಿಕೆ — ಈ ಪದದ ತತ್ಸಮ ರೂಪ

(ಎ) ಶ್ರೇಣಿ (ಬಿ) ಶ್ರೇಣಿಕಾ

(ಸಿ) ನಿಶ್ಚಯ (ಡಿ) ನಿತ್ಯ

ಉತ್ತರ : ________________

9. 'ತೃಷೆ' — ಈ ಶಬ್ದದ ಅರ್ಥ

(ಎ) ಬಾಯಾರಿಕೆ (ಬಿ) ಹಸಿವು

(ಸಿ) ದ್ವೇಷ (ಡಿ) ಬೆಳಗು

ಉತ್ತರ : ________________

10. 'ಒಂದು ದಿನ ಮುಂಚೆ ಉದುರಿದರೆ ತಪ್ಪೇನು' — ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ಭಾವಸೂಚಕ

(ಸಿ) ಪ್ರಶ್ನಾರ್ಥಕ (ಡಿ) ವಿವರಣಾತ್ಮಕ

ಉತ್ತರ : ________________

11. 'ಎತ್ಕೊಂಡು' — ಈ ಪದದ ಗ್ರಾಂಥಿಕ ರೂಪ

(ಎ) ಎತ್ತಿಕೊಂಡು (ಬಿ) ಎತ್ತನ್ನು ಕೊಂಡು

(ಸಿ) ಎಷ್ಟನ್ನು ಕೊಂಡು (ಡಿ) ಎಷ್ಟೊಂದು

ಉತ್ತರ : ________________

12. 'ಪ್ರತ್ಯುಪಕಾರ' — ಇದು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಗುಣ (ಬಿ) ವೃದ್ಧಿ

(ಸಿ) ಯಣ್ (ಡಿ) ಆಗಮ

ಉತ್ತರ : ________________

13. ಈ ಪದವು ಕೃದಂತಾವ್ಯಯಕ್ಕೆ ಉದಾಹರಣೆಯಾಗಿದೆ

(ಎ) ಬರೆದಾನು (ಬಿ) ಬರೆದನು

(ಸಿ) ಬರೆಯುತ್ತ (ಡಿ) ಬರೆಯಲಿ

*ಉತ್ತರ :* ______

14. 'ಬಳೆಗಾರ' — ಈ ಪದದಲ್ಲಿರುವ ತದ್ಧಿತ ಪ್ರತ್ಯಯ

(ಎ) ಕಾರ (ಬಿ) ಆರ

(ಸಿ) ಖಾರ (ಡಿ) ಗಾರ

*ಉತ್ತರ :* ______

15. ಈ ಪದವು ಆದೇಶ ಸಂಧಿಗೆ ಉದಾಹರಣೆಯಾಗಿದೆ

(ಎ) ಮನೆಯಲ್ಲಿ (ಬಿ) ಕಂಬನಿ

(ಸಿ) ಊರೂರು (ಡಿ) ಮಗುವನ್ನು

*ಉತ್ತರ :* ______

16. ಈ ಕೆಳಗಿನ *'ಅ'* ಪಟ್ಟಿಯಲ್ಲಿರುವ ಅಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು *'ಬ'* ಪಟ್ಟಿಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| *ಅ ಪಟ್ಟಿ* | | *ಬ ಪಟ್ಟಿ* | |
|---|---|---|---|
| i) | ದ್ವಿರುಕ್ತಿ | ಅ) | ಗುಳುಗುಳು |
| ii) | ನುಡಿಗಟ್ಟು | ಆ) | ವೈಶಾಖ |
| iii) | ಅನುಕರಣಾವ್ಯಯ | ಇ) | ಮನೆ ಮನೆ |
| iv) | ಪೋರ್ಚುಗೀಸ್ | ಈ) | ಕಣ್ಣೊಡು |
| v) | ತದ್ಭವ | ಉ) | ಜುಲ್ಮಾನೆ |
| | | ಊ) | ಬೇಸಾಯ |
| | | ಋ) | ಜಂಗಾಲು |
| | | ಎ) | ರೈಲು |

*ಉತ್ತರ :* i) ______

ii) ______

iii) ______

iv) ______

v) ______

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ತುಳು ಒಂದು ಸುಂದರ ........................................................................................ ಭಾಷೆ.

18. ದೇವರು ಅವರ ........................................................................................ ತಣ್ಣಗಿಟ್ಟಿರಲಿ ಸ್ವಾಮಿ.

19. ಅಮಾತ್ಯರಾಕ್ಷಸನ ಪರಮಮಿತ್ರನು ........................................................................................ .

20. ಹಿತವಿರಲಿ ವಚನದಲಿ ........................................................................................ ಬಿಡದಿರಲಿ.

21. ಕರಿ ಕೇಸರಿಯುಂ ........................................................................................ ಪರಿಯಂ ಪರುಠವಿಸದಿರ್.

ಈ ಕೆಳಗಿನ ಪ್ರತಿ ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 10 × 1 = 10

22. ಎಣ್ಣೆ-ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?

23. ಮಕ್ಕಳು ಅಜ್ಜನ ಎಡೆಗೆ ಕೈಹಾಕಿದ್ದು ಯಾವಾಗ ?

24. ಶಾಲೆಯಲ್ಲಿ ದಾಖಲೆಯಲ್ಲಿಲ್ಲದ ಮಕ್ಕಳು ಯಾರವು ?

25. ಸಿದ್ಧಾರ್ಥಕನಿಗೆ ಉಚಿತವನ್ನು ಕೊಡಿಸಿದವರು ಯಾರು ?

26. ಮೂಲ ಬಾವಿಯಲ್ಲಿ ಏನನ್ನು ಕಂಡಿತು ?

27. ಯಾವುದನ್ನು ಮೀರಿದ ಸ್ವರ್ಗವಿಲ್ಲ ?

28. ಗರತಿ ತನ್ನ ತೌರಿಗೆ ಹೋಗಲು ಎಷ್ಟು ಹೊತ್ತು ಬೇಕೆಂದು ಹೇಳುತ್ತಾಳೆ ?

29. ಕಂದನ ಮೋರೆಯನ್ನು ತಾಯಿ ಯಾವುದರಿಂದ ತೊಳೆಯುವೆನೆಂದು ಹೇಳುತ್ತಾಳೆ ?

30. ಶಬರನಿಗೆ ವಿಚಿತ್ರವಾಗಿ ಕಂಡುದು ಯಾವುದು ?

31. ದುರ್ಯೋಧನನು ಎಲ್ಲಿ ಅಡಗಿ ಕುಳಿತಿದ್ದನು ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30

32. ಜ್ಞಾನ ಭಂಡಾರ ಭದ್ರವಾಗಲು ಲಿಪಿ ಹೇಗೆ ಸಹಾಯಕವಾಯಿತು ?

33. ಅಳು–ನಗು ಕುರಿತು ಡಿ.ವಿ. ಗುಂಡಪ್ಪನವರು ಏನೆಂದು ಹೇಳಿದ್ದಾರೆ ?

34. ಮಂಜಪ್ಪನವರು ಕಾಲೇಜಿಗೆ ಬಿಡುವಿದ್ದಾಗ ವಾಚನಾಲಯದಲ್ಲಿ ಓದುತ್ತಿದ್ದ ಗ್ರಂಥಗಳು ಯಾವುವು ?

35. ಮಂಜಪ್ಪನವರು 'ನಾನು ಎರಡು ದೋಣಿಗಳ ಮೇಲೆ ಕಾಲಿಟ್ಟಿದ್ದೆ'' ಎಂದು ಹೇಳಲು ಕಾರಣವೇನು ?

36. ಜಗದಾತ್ಮಾನಂದರ ಅಭಿಪ್ರಾಯದಂತೆ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುವುದು ಹೇಗೆ ?

37. ನೌಕಾಸೇನೆಯನ್ನು ಕುರಿತು ಪುರಾಣಗಳಲ್ಲಿ ಯಾವ ಉಲ್ಲೇಖಗಳಿವೆ ? ತಿಳಿಸಿ.

38. ವಿಷ್ಣುದಾಸನ ಬುದ್ಧಿಪೂರ್ವಕ ಮರಣಕ್ಕೆ ಕಾರಣವೇನು ?

39. ಶಾಲೆಯ ನೋಟೀಸ್ ಬೋರ್ಡಿನಲ್ಲಿ ಬರೆಯಲಾಗಿದ್ದ ಸೂಚನೆಗಳು ಯಾವುವು ?

40. ನಕುಲಾದಿ ಭೀಮರಿಗೆ ಒದಗಿದ ದುರ್ಗತಿಯೇನು ?

41. ಆಕಾಶ, ಗೋವು, ಸತ್ಯ, ಶಕ್ರ – ಇವುಗಳ ಶ್ರೇಷ್ಠತೆಯನ್ನು ಕುರಿತು ಧರ್ಮರಾಜನ ಅಭಿಪ್ರಾಯವೇನು ?

42. ‘ರಸಬಳ್ಳಿ’ ಪದ್ಯದಲ್ಲಿ ಮಣ್ಣನ್ನು ಕುರಿತು ಜನಪದರು ಏನೆಂದು ಹೇಳಿದ್ದಾರೆ ?

43. ಬೇಡವೇಷಧಾರಿಯಾದ ಶಿವ ಅರ್ಜುನನ್ನು ಅಪಹಾಸ್ಯ ಮಾಡಿದುದು ಹೇಗೆ ?

44. ಅಜಗಣ್ಣನ ಯೋಗದ ಬಗ್ಗೆ ಮುಕ್ತಾಯಕ್ಕನ ಅಭಿಪ್ರಾಯವೇನು ?

45. ಅಕ್ಕ ಮಹಾದೇವಿಯ ಅಭಿಪ್ರಾಯದಂತೆ ಹುಳಿ, ಸಿಹಿ ಸ್ವಾದವುಳ್ಳ ಫಲಗಳು ಯಾವುವು ?

46. ಪಂಪನು ಬನವಾಸಿ ದೇಶವನ್ನು ನೆನೆಯಲು ಕಾರಣವಾದ ಅಂಶಗಳು ಯಾವುವು ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ'.

48. 'ಮನಸ್ಸು ರೋಗ ಸೃಷ್ಟಿಸಬಲ್ಲುದು, ಗುಣಪಡಿಸಬಲ್ಲುದು'.

49. 'ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು'.

50. 'ಇದು ಪಾಂಚಾಲಿ ಪ್ರಪಂಚಕ್ಕೆ'

51. 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು'.

ಈ ಕವಿಗಳ / ಸಾಹಿತಿಗಳ ಕಾಲ, ಸ್ಥಳ ಹಾಗೂ ಒಂದು ಕೃತಿಯನ್ನು ತಿಳಿಸಿ, ವಾಕ್ಯರೂಪದಲ್ಲಿ ಉತ್ತರ ಬರೆಯಿರಿ : $2 \times 3 = 6$

52. ಎಚ್.ಜಿ. ಲಕ್ಕಪ್ಪಗೌಡ

53. ಪುಲಿಗೆರೆ ಸೋಮನಾಥ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

'ಧನುಶರಮೆತ್ತ ನಿನ್ನ ತಪಮೆತ್ತ ವಿಚಿತ್ರಮಿದಲ್ತೆ ಧಾತ್ರಿಯೊಳ್'

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಸಮನ್ವಯಗೊಳಿಸಿ ಬರೆಯಿರಿ : 1 × 3 = 3

'ಅಳುವ ಕಂದನ ತುಟಿಯು ಹವಳದ ಕುಡಿಯಂಗ'.

56. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

— ಅತಿ ಆಸೆ ಗತಿ ಕೆಡಿಸಿತು.

— ಹಾಸಿಗೆಯಿದ್ದಷ್ಟು ಕಾಲುಚಾಚು.

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4

ಪರರ ಕಣ್ಣ ಕನ್ನಡಕದಲ್ಲಿ ______

______

______

______ ದೀಪ್ತಿಯಲಿ ಬೆಳೆ.

*ಅಥವಾ*

ಗುರುಹಿರಿಯರ ______

______

______

______ ದೊರೆಯು ಏತಕೆ.

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ಮುಡಿಕಟ್ಟಿನಿಂತು ಉಡಿತುಂಬಿ ಬಂತು
ಏಕಜೀವ ಶ್ರುತಿ ವೈವಿಧ್ಯ ಸಂಸ್ಕೃತಿ
ಪ್ರಜಾಮಾತೆ ನೀ ವಿಶ್ವಬಂಧ ನೀ
ವೇದ ಕುರಾನ ಬೈಬಲ್ ಸಿಂಧು ನೀ.

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಬುದ್ಧನು ಅಂಗುಲಿಮಾಲನ ಮನಸ್ಸನ್ನು ಪರಿವರ್ತಿಸಿದ ಬಗೆ ಹೇಗೆ ? ವಿವರಿಸಿ.
— ಮೊಲವು ಸಿಂಹವನ್ನು ಕೊಂದ ಬಗೆಯನ್ನು ವಿವರಿಸಿ.
— ಪರಂಗಿ ಟೋಪಿ ಸಾಹೇಬರು ಶಾಲೆಗೆ ಭೇಟಿ ನೀಡಿದ ಪ್ರಸಂಗವನ್ನು ವಿವರಿಸಿ.

60.

61. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಅರಿವು ಪದ್ಯದಲ್ಲಿ ಕನಕದಾಸರು ನೀಡಿದ ಜೀವನ ಸಂದೇಶವೇನು ?

— ದುರ್ಯೋಧನನು ವೈಶಂಪಾಯನ ಸರೋವರದಿಂದ ಹೊರಬಂದ ರೀತಿಯನ್ನು ಕವಿಯ ಆಶಯದಂತೆ ನಿಮ್ಮ ಮಾತುಗಳಲ್ಲಿ ಬರೆಯಿರಿ.

62. — ನಿಮ್ಮನ್ನು ಪ್ರಸನ್ನ / ಪಾವನಿ ಎಂದು ಭಾವಿಸಿ ನಿಮ್ಮ ಬಡಾವಣೆಯ ರಸ್ತೆಯನ್ನು ದುರಸ್ತಿಗೊಳಿಸುವಂತೆ ಕೋರಿ ನಗರಸಭೆ / ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಮನವಿ ಪತ್ರವೊಂದನ್ನು ಬರೆಯಿರಿ. $1 \times 5 = 5$

**ಅಥವಾ**

— ನೀವು ಬೆಂಗಳೂರಿನ ವಿವೇಕಾನಂದ ಪ್ರೌಢಶಾಲೆಯ ಹತ್ತನೆಯ ತರಗತಿಯಲ್ಲಿ ಓದುತ್ತಿರುವ ನವೀನ್ / ನಮಿತಾ ಎಂದು ಭಾವಿಸಿ ಬೆಳಗಾವಿಯಲ್ಲಿರುವ ನಿಮ್ಮ ತಂದೆಗೆ ಶಾಲಾ ಶೈಕ್ಷಣಿಕ ಪ್ರವಾಸವನ್ನು ವಿವರಿಸಿ ಪತ್ರವೊಂದನ್ನು ಬರೆಯಿರಿ.

63. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದಕ್ಕೆ ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಪರಿಸರವನ್ನು ಸಂರಕ್ಷಿಸುವಲ್ಲಿ ವಿದ್ಯಾರ್ಥಿಗಳ ಪಾತ್ರ

— ದೂರದರ್ಶನ ಒಂದು ಉತ್ತಮ ಮಾಧ್ಯಮ

— ರಾಷ್ಟ್ರೀಯ ಭಾವೈಕ್ಯತೆ